**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಆರನೇ ಅಧಿವೇಶನ**

# ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–02)**

ಕರ್ನಾಟಕ ಗಿರವಿದಾರರ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗಿರವಿದಾರರ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 13)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಗಿರವಿದಾರರ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 13)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) 3ನೇ ಪ್ರಕರಣದ ವಿವರಣೆ-2ರಲ್ಲಿ “ಐದು ವರ್ಷಗಳ” ಎಂಬ ಪದಗಳ ಬದಲಿಗೆ “ಎರಡು ವರ್ಷಗಳ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 15ರ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ “ಐದು ನೂರು ರೂಪಾಯಿಗಳಿಗೆ” ಎಂಬ ಪದಗಳ ಬದಲಿಗೆ “ಐದು ಲಕ್ಷ ರೂಪಾಯಿಗಳವರೆಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಪ್ರಕರಣ 16ರ ತಿದ್ದುಪಡಿ.-** ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ,-

(ಎ) (7)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(8) ಗಿರವಿ ಇಟ್ಟವರಿಂದ ಹಣ ವಸೂಲಾತಿಗಾಗಿ ಆತನಾಗಲಿ ಅಥವಾ ಆತನ ಏಜೆಂಟರ ಮೂಲಕವಾಗಲಿ ಅಥವಾ ಆತನ ಕುಟುಂಬ ಸದಸ್ಯರಿಂದಾಗಲಿ ಯಾವುದೇ ಇತರ ಬಲವಂತದ ಕ್ರಮವನ್ನು ಬಳಸತಕ್ಕದ್ದಲ್ಲ ಮತ್ತು ಬಲವಂತ ವಸೂಲಾತಿಯ ಯಾವುದೇ ಸ್ವರೂಪಕ್ಕಾಗಿ ಈ ಅಧಿನಿಯಮದ ಉಪಬಂಧಗಳಡಿ ದಂಡನೆಗೆ ಹೊಣೆಯಾಗತಕ್ಕದ್ದು ಹಾಗೂ ಈ ಅಧಿನಿಯಮದ ಮೇರೆಗೆ ಉಪಬಂಧಿಸಲಾದಂತೆ ಅಂಥ ಗಿರವಿದಾರನ ನೋಂದಣಿಯನ್ನು ಅಮಾನತ್ತುಪಡಿಸಲು ಅಥವಾ ರದ್ದುಪಡಿಸಲು ನೋಂದಣಿ ಪ್ರಾಧಿಕಾರಿಯು ಅಧಿಕಾರವುಳ್ಳವನಾಗಿರತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಗಳಿಗಾಗಿ, ಗಿರವಿದಾರನ ಮೂಲಕ ಗಿರವಿ ಇಟ್ಟವರ ವಿರುದ್ಧದ “ಬಲವಂತದ ಕ್ರಮ”ವು ಈ ಮುಂದಿನವುಗಳನ್ನು ಒಳಗೊಳ್ಳುವುದು, ಎಂದರೆ:-

(i) ಗಿರವಿ ಇಟ್ಟವನನ್ನು ಅಥವಾ ಆತನ/ಆಕೆಯ ಕುಟುಂಬ ಸದಸ್ಯರಿಗೆ ಒತ್ತಡವನ್ನು ಹಾಕುವುದು ಅಥವಾ ತಡೆಯೊಡ್ಡುವುದು ಅಥವಾ ಹಿಂಸೆಯನ್ನು ಬಳಸುವುದು ಅಥವಾ ಅವಮಾನಿಸುವುದು ಅಥವಾ ಬೆದರಿಸುವುದು, ಅಥವಾ

(ii) ಗಿರವಿ ಇಟ್ಟವನನ್ನು, ಆತನ/ಆಕೆಯ ಕುಟುಂಬ ಸದಸ್ಯರನ್ನು ಸ್ಥಳದಿಂದ ಸ್ಥಳಕ್ಕೆ ನಿರಂತರವಾಗಿ ಹಿಂಬಾಲಿಸುವುದು ಅಥವಾ ಆತನ/ಆಕೆಯ ಒಡೆತನದ ಅಥವಾ ಬಳಕೆಯಲ್ಲಿನ ಯಾವುದೇ ಸ್ವತ್ತಿಗೆ ಮಧ್ಯಪ್ರವೇಶಿಸುವುದು ಅಥವಾ ಆತನ/ಆಕೆಯಿಂದ ಕಿತ್ತುಕೊಳ್ಳುವುದು ಅಥವಾ ಯಾವುದೇ ಅಂಥ ಸ್ವತ್ತಿನ ಬಳಕೆಗೆ ಅಡ್ಡಿಪಡಿಸುವುದು, ಅಥವಾ

(iii) ಗಿರವಿ ಇಟ್ಟವನು ವಾಸವಾಗಿರುವ ಅಥವಾ ಕೆಲಸ ಮಾಡುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಮನೆ ಅಥವಾ ಇತರ ಸ್ಥಳಕ್ಕೆ ಬಲವಂತದ ಕ್ರಮವನ್ನು ಕೈಗೊಳ್ಳುವ ಉದ್ದೇಶದಿಂದ ಆಗಾಗ ಭೇಟಿ ನೀಡುವುದು ಅಥವಾ ಭೇಟಿಯಾಗುವಂತೆ ಮಾಡುವುದು, ಅಥವಾ

(iv) ಗಿರವಿ ಇಟ್ಟವನಿಗೆ ಹಣ ಪಾವತಿಗಾಗಿ ಬಲವಂತದ ಮತ್ತು ಅನುಚಿತ ಪ್ರಭಾವವನ್ನು ಬಳಸಿ ಮಾತುಕತೆಗೆ/ಒತ್ತಾಯಿಸುವುದಕ್ಕೆ ಖಾಸಗಿ ಅಥವಾ ಹೊರಗುತ್ತಿಗೆ ಅಥವಾ ಬಾಹ್ಯ ಏಜೆನ್ಸಿಗಳ, ಕ್ರಿಮಿನಲ್ ಹಿನ್ನಲೆಯುಳ್ಳವರ ಸೇವೆಯನ್ನು ಬಳಸುವುದು, ಅಥವಾ

(v) ಸರ್ಕಾರದ ಯಾವುದೇ ಕಾರ್ಯಕ್ರಮದಡಿಯಲ್ಲಿ ಗಿರವಿ ಇಟ್ಟವನಿಗೆ ಪ್ರಯೋಜನದ ಹಕ್ಕುಗಳುಳ್ಳ ಯಾವುದೇ ದಸ್ತಾವೇಜನ್ನು ಸಾಲಗಾರನಿಂದ ಬಲವಂತವಾಗಿ ಪಡೆಯುವುದು."

(ಬಿ) "ಆರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಹತ್ತು ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) "ಒಂದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**5. ಪ್ರಕರಣ 16ಎ-ರ ತಿದ್ದುಪಡಿ.-** (1) ಮೂಲ ಅಧಿನಿಯಮದ 16ಎ ಪ್ರಕರಣದಲ್ಲಿನ (2)ನೇ ಉಪ-ಪ್ರಕರಣದಲ್ಲಿ,-

(ಎ) "ಆರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಹತ್ತು ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಒಂದು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಐದು ಲಕ್ಷ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) ಪರಂತುಕದಲ್ಲಿ,-

(i) "ಒಂದು ತಿಂಗಳಿಗಿಂತ" ಎಂಬ ಪದಗಳ ಬದಲಿಗೆ "ಮೂರು ವರ್ಷಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಐದು ನೂರು ರೂಪಾಯಿಗಳಿಗಿಂತ" ಎಂಬ ಪದಗಳ ಬದಲಿಗೆ "ಎರಡು ಲಕ್ಷ ರೂಪಾಯಿಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ,-

(ಎ) (1)ನೇ ಉಪ-ಪ್ರಕರಣದಲ್ಲಿ,-

(i) “ಐವತ್ತು ರೂಪಾಯಿಗಳಿಗೆ” ಎಂಬ ಪದಗಳ ಬದಲಿಗೆ “ಮೂರು ಲಕ್ಷ ರೂಪಾಯಿಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) “ಒಂದು ನೂರು ರೂಪಾಯಿಗಳಿಗೆ” ಎಂಬ ಪದಗಳ ಬದಲಿಗೆ “ಐದು ಲಕ್ಷ ರೂಪಾಯಿಗಳಿಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2)ನೇ ಉಪ-ಪ್ರಕರಣದಲ್ಲಿ “ಹತ್ತು ರೂಪಾಯಿಗಳಿಗೆ” ಎಂಬ ಪದಗಳ ಬದಲಿಗೆ “ಎರಡು ಲಕ್ಷ ರೂಪಾಯಿಗಳವರೆಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 18ಎ, 18ಬಿ ಮತ್ತು 18ಸಿ ಹೊಸ ಪ್ರಕರಣಗಳ ಸೇರ್ಪಡೆ**.- ಮೂಲ ಅಧಿನಿಯಮದ 18ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

“**18-ಎ. ಒಂಬುಡ್ಸ್‌ಪರ್ಸನ್ ಮೂಲಕ ವಿವಾದಗಳ ಇತ್ಯರ್ಥಪಡಿಸುವಿಕೆ.-** ವಿವಾದಗಳನ್ನು ಇತ್ಯರ್ಥಪಡಿಸುವುದಕ್ಕಾಗಿ, ಗಿರವಿ ಇಟ್ಟವನು ಮತ್ತು ಗಿರವಿದಾರನ ನಡುವೆ ಮಧ್ಯಸ್ಥಗಾರನಾಗಿ ಕಾರ್ಯನಿರ್ವಹಿಸಲು ಸರ್ಕಾರವು ಅಧಿಸೂಚನೆಯ ಮೂಲಕ ಒಂಬುಡ್ಸ್‌ಪರ್ಸನ್‌ನನ್ನು ನೇಮಕ ಮಾಡತಕ್ಕದ್ದು. ಇತ್ಯರ್ಥ ಮತ್ತು ಮಧ್ಯಸ್ಥಿಕೆಯ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾಂಥ ವಿಧಾನದಲ್ಲಿರತಕ್ಕದ್ದು.

**18-ಬಿ. ಕುಂದುಕೊರತೆಗಳ ನಿವಾರಣಾ ವೇದಿಕೆ.-** ಸರ್ಕಾರವು ಸೂಕ್ತವಾದ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯನ್ನು ಸ್ಥಾಪಿಸತಕ್ಕದ್ದು. ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳು ನಿಯಮಿಸಬಹುದಾಂಥ ವಿಧಾನದಲ್ಲಿರತಕ್ಕದ್ದು.

**18-ಸಿ. ಅಧಿಕೃತಗೊಳಿಸಿದ ಅಧಿಕಾರಿ.-** (1) ಈ ಅಧಿನಿಯಮದ ಮತ್ತು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 14)ರ ಉಪಬಂಧಗಳನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದರೆ, ಕಂದಾಯ ಇಲಾಖೆ ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಸಮಾಜ ಕಲ್ಯಾಣ ಇಲಾಖೆ ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಥವಾ ಬುಡಕಟ್ಟು ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯ ಗ್ರೂಪ್ ಬಿ ಅಧಿಕಾರಿಯು ಸಂಬಂಧಪಟ್ಟ ರಿಜಿಸ್ಟ್ರಾರ್, ಸಹಾಯಕ ರಿಜಿಸ್ಟ್ರಾರ್ ಅಥವಾ ಈ ಕುರಿತು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ ವರದಿ ಮಾಡತಕ್ಕದ್ದು.

(2) ರಿಜಿಸ್ಟ್ರಾರ್, ಸಹಾಯಕ ರಿಜಿಸ್ಟ್ರಾರ್ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ಆತನ ಸ್ವಂತ ಪ್ರಸ್ತಾವ ಅಥವಾ ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಧಿಕಾರಿಗಳು ಸಲ್ಲಿಸಿದ ವರದಿಯ ಮೇರೆಗೆ , ಈ ಅಧಿನಿಯಮದ ಉಪಬಂಧಗಳಡಿ ಕ್ರಮವನ್ನು ಕೈಗೊಳ್ಳತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಲೈಸೆನ್ಸ್‌ಯುಕ್ತ ಗಿರವಿದಾರ ಮತ್ತು ಲೈಸೆನ್ಸ್‌ರಹಿತ ಗಿರವಿದಾರರು ನೀಡುವ ದುಬಾರಿ ಬಡ್ಡಿ ದರಗಳ ಅನುಚಿತ ತೊಂದರೆ ಮತ್ತು ಬಲವಂತದ ವಸೂಲಾತಿ ವಿಧಾನಗಳಿಂದ ಆರ್ಥಿಕವಾಗಿ ದುರ್ಬಲ ಗುಂಪುಗಳು ಮತ್ತು ವ್ಯಕ್ತಿಗಳನ್ನು ರಕ್ಷಿಸುವುದಕ್ಕಾಗಿ, ಕರ್ನಾಟಕ ಗಿರವಿದಾರರ ಅಧಿನಿಯಮ, 1961(1962ರ ಕರ್ನಾಟಕ ಅಧಿನಿಯಮ 13)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತುಜ್ಞಾಪನ ಪತ್ರ**

| | |
|---|---|
| **ಖಂಡ 7** | (1) ಈ ಖಂಡದ ಮೂಲಕ ಸೇರಿಸಲು ಪ್ರಸ್ತಾಪಿಸಿರುವ 18ಎ ಪ್ರಕರಣವು ಒಂಬುಡ್ಸ್‌ಪರ್ಸನ್‌ನ ಮೂಲಕ ಇತ್ಯರ್ಥ ಮತ್ತು ಮಧ್ಯಸ್ಥಿಕೆಯ ವಿಧಾನಕ್ಕಾಗಿನ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ನಿಯಮಗಳ ಮೂಲಕ ನಿಯಮಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| | (2) ಈ ಖಂಡದ ಮೂಲಕ ಸೇರಿಸಲು ಪ್ರಸ್ತಾಪಿಸಿರುವ 18ಬಿ ಪ್ರಕರಣವು ಕುಂದುಕೊರತೆ ನಿವಾರಣಾ ವೇದಿಕೆಯ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಗಾಗಿನ ಕಾರ್ಯವಿಧಾನ ಮತ್ತು ಮಾರ್ಗ ಸೂಚಿಗಳನ್ನು ನಿಯಮಗಳ ಮೂಲಕ ನಿಯಮಿಸಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಕ್ಯಾತ್ಸಂದ್ರ ಎನ್. ರಾಜಣ್ಣ**
ಕೃಷಿ ಮಾರುಕಟ್ಟೆಯನ್ನು ಹೊರತುಪಡಿಸಿ
ಸಹಕಾರ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಕರ್ನಾಟಕ ಗಿರವಿದಾರರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 13) ಉದ್ಧೃತ ಭಾಗ

**XXX XXX XXX**

**3. ಗಿರವಿದಾರನು ಲೈಸೆನ್ಸನ್ನು ಪಡೆಯತಕ್ಕದ್ದು.-** ಯಾರೇ ವ್ಯಕ್ತಿಯು, ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬರುವಂಥ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾದ ತರುವಾಯ, ಈ ಅಧಿನಿಯಮದ ಮೇರೆಗೆ ಗಿರವಿದಾರನ ಲೈಸೆನ್ಸನ್ನು ಪಡೆದುಕೊಂಡಿದ್ದ ಹೊರತು ಅಂಥ ಪ್ರದೇಶದಲ್ಲಿ ಯಾವುದೇ ಸ್ಥಳದಲ್ಲಿ ಗಿರವಿದಾರನೆಂದು ವ್ಯವಹಾರವನ್ನು ಮತ್ತು ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 1985ರ ಪ್ರಾರಂಭದ ತರುವಾಯ 4ಎ ಪ್ರಕರಣದಲ್ಲಿ ಉಪಬಂಧಿಸಿದಂತೆ ಭದ್ರತಾ ಠೇವಣಿಯನ್ನು ಸಂದಾಯ ಮಾಡಿದ ಮೇಲೆ ಹೊರತು ನಡೆಸತಕ್ಕದ್ದಲ್ಲ ಅಥವಾ ನಡೆಸುವುದನ್ನು ಮುಂದುವರಿಸತಕ್ಕದ್ದಲ್ಲ.

**ವಿವರಣೆ1.-** ಅದೇ ಪಟ್ಟಣದಲ್ಲಿಯೇ ಆಗಲಿ ಅಥವಾ ಗ್ರಾಮದಲ್ಲಿಯೇ ಆಗಲಿ ಅಥವಾ ಬೇರೆ ಬೇರೆ ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿಯೇ ಆಗಲಿ ಒಂದಕ್ಕಿಂತ ಹೆಚ್ಚು ಅಂಗಡಿಯನ್ನು ಅಥವಾ ವ್ಯವಹಾರದ ಸ್ಥಳವನ್ನು ಗಿರವಿದಾರನು ಹೊಂದಿದ್ದರೆ ಅವನು ಅಂಥ ಪ್ರತಿಯೊಂದು ಅಂಗಡಿಗೆ ಅಥವಾ ವ್ಯವಹಾರದ ಸ್ಥಳಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಗಿರವಿದಾರನ ಲೈಸೆನ್ಸನ್ನು ಪಡೆಯತಕ್ಕದ್ದು.

**ವಿವರಣೆ2.-** ಈ ಅಧಿನಿಯಮದ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಗಿರವಿದಾರನ ಲೈಸೆನ್ಸು, ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು ಆದರೆ, ಅದನ್ನು ಅವಧಿಯಿಂದ ಅವಧಿಗೆ ನವೀಕರಿಸಬಹುದು.

**XXX XXX XXX**

**15. ಗಿರವಿದಾರನು ಲೆಕ್ಕಪತ್ರಗಳಲ್ಲಿ ನಿರ್ದಿಷ್ಟಪಡಿಸುವುದಕ್ಕಿಂತ ಕಡಿಮೆ ಮೊಬಲಗನ್ನು ಸಾಲ ಕೊಡುವುದು ಅಥವಾ ಹೆಚ್ಚಿನ ಬಡ್ಡಿಯನ್ನು ಸ್ವೀಕರಿಸುವುದು ದಂಡನೀಯವಾಗತಕ್ಕದ್ದು.-** (1) ಗಿರವಿ ಚೀಟಿಯಲ್ಲಿ ಅಥವಾ ಅವನ ಲೆಕ್ಕಪತ್ರದಲ್ಲಿ ಅಥವಾ ರಿಜಿಸ್ಟರುಗಳಲ್ಲಿ ತೋರಿಸಿರುವುದಕ್ಕಿಂತ ಕಡಿಮೆ ಮೊಬಲಗನ್ನು ವಾಸ್ತವವಾಗಿ ಸಾಲವಾಗಿ ಕೊಡುವ, ಅಥವಾ ಗಿರವಿ ಚೀಟಿಯಲ್ಲಿ ಅಥವಾ ಅವನ ಲೆಕ್ಕಗಳಲ್ಲಿ ಅಥವಾ ರಿಜಿಸ್ಟರುಗಳಲ್ಲಿ ತೋರಿಸಿರುವುದಕ್ಕಿಂತ ಹೆಚ್ಚಿನ ದರದಲ್ಲಿ ಬಡ್ಡಿಯನ್ನು ಅಥವಾ ಯಾವುದೇ ಇತರ ವೆಚ್ಚವನ್ನು ತೆಗೆದುಕೊಳ್ಳುವ ಅಥವಾ ಸ್ವೀಕರಿಸುವ ಯಾರೇ ಗಿರವಿದಾರನು, ಅಪರಾಧವು ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**16. ಗಿರವಿದಾರನ ಕೆಲವು ಇತರ ಕಾರ್ಯಗಳು ದಂಡನೀಯವಾಗತಕ್ಕದ್ದು.-** (1) ಹದಿನಾಲ್ಕು ವರ್ಷಗಳಿಗಿಂತ ಕಡಿಮೆ ವಯಸ್ಸಿನವನೆಂದು ಅಥವಾ ಮತ್ತೇರಿರುವುದಾಗಿ ಕಂಡುಬರುವ ಯಾರೇ ವ್ಯಕ್ತಿಯಿಂದ ಗಿರವಿಯಾಗಿ ವಸ್ತುವನ್ನು ತೆಗೆದುಕೊಳ್ಳುವ; ಅಥವಾ

(2) ಇನ್ನೊಬ್ಬ ಗಿರವಿದಾರನು ಕೊಟ್ಟ ಗಿರವಿ ಚೀಟಿಯನ್ನು ಗಿರವಿಯಲ್ಲಿ ಅಥವಾ ವಿನಿಮಯದಲ್ಲಿ ಖರೀದಿಸುವ ಅಥವಾ ತೆಗೆದುಕೊಳ್ಳುವ; ಅಥವಾ

(3) ಗಿರವಿಯಲ್ಲಿ ಒತ್ತೆಗಳನ್ನು ತೆಗೆದುಕೊಳ್ಳಲು ಹದಿನಾರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿಯನ್ನು ನಿಯೋಜಿಸಿಕೊಳ್ಳುವ; ಅಥವಾ

(4) ಯಾವುದೇ ಒತ್ತೆಯನ್ನು ಅದು ಅವನಲ್ಲಿ ಗಿರವಿ ಇದ್ದಾಗ ಬಹಿರಂಗ ಹರಾಜಿನಲ್ಲಿ ಹೊರತು, ಯಾವುದೇ ನೆಪದಲ್ಲಿ ಖರೀದಿ ಮಾಡುವ; ಅಥವಾ

(5) ಯಾವುದೇ ಒತ್ತೆಯನ್ನು ಅದು ಅವನಲ್ಲಿ ಗಿರವಿ ಇದ್ದಾಗ ಅದನ್ನು ತಾನೇ ಖರೀದಿಸುವ ದೃಷ್ಟಿಯಿಂದ ಬಿಡುಗಡೆ ಮಾಡಲು ಅವಕಾಶ ಮಾಡಿಕೊಡುವ; ಅಥವಾ

(6) ಬಿಡಿಸಿಕೊಳ್ಳುವ ಕಾಲದೊಳಗೆ ಅದರ ಖರೀದಿಗಾಗಿ, ಮಾರಾಟಕ್ಕಾಗಿ ಅಥವಾ ವಿಲೆಗಾಗಿ ಅಥವಾ ಯಾವುದೇ ವಸ್ತುವನ್ನು ಗಿರವಿ ಇಡುವ ಅಥವಾ ಗಿರವಿ ಇಡಲು ಕೋರುವ ಯಾರೇ ವ್ಯಕ್ತಿಯೊಂದಿಗೆ ಅಥವಾ ಅದರ ಒಡೆಯನೊಂದಿಗೆ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ಮಾಡಿಕೊಳ್ಳುವ; ಅಥವಾ

(7) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದಂಥ ಕಾಲದಲ್ಲಿ ಮತ್ತು ಅಂಥ ರೀತಿಯಲ್ಲಿ ಹೊರತು, ಅವನಲ್ಲಿ ಗಿರವಿ ಇಟ್ಟ ಯಾವುದೇ ಒತ್ತೆಯನ್ನು ಮಾರಾಟ ಮಾಡುವ, ಆಧಾರ ಮಾಡುವ, ಗಿರವಿ ಇಡುವ ಅನ್ಯಥಾ ವಿಲೆ ಮಾಡುವಕಅಪರಾಧವು ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, (7)ನೇ ಖಂಡದಲ್ಲಿ ಉಲ್ಲೇಖಿಸಿದ ಕಾರ್ಯಕ್ಕಾಗಿ ಕಾರಾವಾಸದ ಅವಧಿಯು ಒಂದು ತಿಂಗಳಿಗಿAತ ಕಡಿಮೆಯಿರತಕ್ಕದ್ದುಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**XXX XXX XXX**

**16ಎ. ಗಿರವಿದಾರನು ಒತ್ತೆಗಳನ್ನು ಬಿಡಿಸಿಕೊಳ್ಳತಕ್ಕದ್ದು.-**

**XXX XXX XXX**

(2) ಹಾಗೆ ಬಿಡಿಸಿಕೊಳ್ಳಲು ತಪ್ಪುವ ಯಾರೇ ಗಿರವಿದಾರನು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಕಾರಾವಾಸದ ಅವಧಿಯು ಒಂದು ತಿಂಗಳಿಗಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**XXX XXX XXX**

**18. ಅಧಿನಿಯಮದ ಉಲ್ಲಂಘನೆಗಾಗಿ ಸಾಮಾನ್ಯ ದಂಡನೆ, ಇತ್ಯಾದಿ.-** (1)ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳನ್ನು ಅಥವಾ ಮಂಜೂರು ಮಾಡಿದ ಲೈಸೆನ್ಸಿನ ಯಾವುದೇ ನಿಬಂಧನೆಗಳನ್ನು ಅಥವಾ ಷರತ್ತುಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಅಂಥ ಉಲ್ಲಂಘನೆಗಾಗಿ ಈ ಅಧಿನಿಯಮದಲ್ಲಿ ಬೇರೆ ಕಡೆ ಯಾವುದೇ ಇತರ ದಂಡನೆಯನ್ನು ಉಪಬಂಧಿಸದಿದ್ದರೆ, ಅಪರಾಧವು ನಿರ್ಣಯವಾದ ಮೇಲೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅಂಥ ವ್ಯಕ್ತಿಯು ಈ ಹಿಂದೆ ಈ ಪ್ರಕರಣದ ಮೇರೆಗೆ ಆಗಲಿ ಅಥವಾ ಈ ಅಧಿನಿಯಮದಲ್ಲಿ ಒಳಗೊಂಡ ಯಾವುದೇ ಇತರ ಉಪಬಂಧದ ಮೇರೆಗೆ ಆಗಲಿ ಅಪರಾಧಿ ಎಂದು ನಿರ್ಣೀತನಾಗಿದ್ದರೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2)3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಗಿರವಿದಾರನ ವ್ಯವಹಾರವನ್ನು ನಡೆಸುತ್ತಿರುವ ಅಥವಾ ನಡೆಸುವುದನ್ನು ಮುಂದುವರೆಸುತ್ತಿರುವ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಯಾರೇ ವ್ಯಕ್ತಿಯು ಅದೇ ಅಪರಾಧವನ್ನು ಅದೇ ವರ್ಷದಲ್ಲಿ ಮಾಡುವುದನ್ನು ಮುಂದುವರೆಸಿದರೆ (1)ನೇ ಉಪಪ್ರಕರಣದ ಮೇರೆಗೆ ಅವನು ಯಾವ ಜುಲ್ಮಾನೆಗೆ ಗುರಿಯಾಗಿರುವನೋ ಆ ಜುಲ್ಮಾನೆಯ ಜೊತೆಗೆ, ಹಾಗೆ ಅಪರಾಧ ಮಾಡುವುದನ್ನು ಅವನು ಮುಂದುವರಿಸುವಂಥ ಅವಧಿಯಲ್ಲಿ ಅಪರಾಧ ನಿರ್ಣಯದ ಹಿಂದಿನ ದಿನಾಂಕದ ತರುವಾಯ ಪ್ರತಿಯೊಂದು ದಿವಸಕ್ಕಾಗಿ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಮತ್ತಷ್ಟು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 3ನೇ ಮಾರ್ಚ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SIXTH SESSION**

# THE KARNATAKA PAWN BROKERS (AMENDMENT) BILL, 2025

**(LA Bill No. 02 of 2025)**

A Bill further to amend the Karnataka Pawn Brokers Act, 1961.

Whereas it is expedient further to amend the Karnataka Pawn Brokers Act, 1961. (Karnataka Act No 13 of 1962) for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Karnataka Pawn Brokers (Amendment) Act, 2025.

(2) It shall come into force at once.

**2. Amendment of section 3.-** In the Karnataka Pawn Brokers Act,1961 (Karnataka Act No 13 of 1962) (hereinafter referred to as the principal Act), in section 3, in the explanation-2 for the words “five years” the words “two years” shall be substituted.

**3. Amendment of section 15.-** In the Principal Act , in section 15, in sub-section (1) for the words "five hundred rupees", the words "five lakh rupees” shall be substituted.

**4. Amendment of section 16.-** In section 16 of the principal Act,

(a) after clause (7) the following shall be inserted, namely,-

“(8) shall not use any coercive action either by himself or by his agents or family member for recovery of money from the pawner and any form of coercive recovery shall be liable for punishment under the provisions of this Act and empower the Registering Authority to suspend or cancel the Registration of such pawn broker as provided under the provisions of this Act.

**Explanation:** For the purposes of this section, "coercive Action" by a pawn broker against the pawner include the following, namely:-

(i) exerting pressure or obstructing or using violence to or insulting or intimidating the pawner or his/her family members, or

(ii) persistently following the pawner, his/her family member from place to place or interfering with any property owned or used by him/her or depriving him/her of, or hindering him/her in the use of any such property, or

(iii) frequenting the house or other place where the pawner resides or works, or carries on business, or happens to be, with an intension of taking coercive action, or

(iv) using the service of private or outsource or external agencies, criminal background to negotiate/urging the pawner to make payment using coercive and undue influence, or

(v) Seeking to take forcibly any document from the pawner which entitles the pawner to a benefit under any Government programme."

(b) for the words "six months", the words "ten years", shall be substituted;

(c) for the words "one thousand rupees", the words "five lakh rupees", shall be substituted; and

(d) the proviso shall be omitted.

**5. Amendment of section 16A.-** In section 16A of the principal Act, in sub-section (2),-

(a) for the words "six months", the words "ten years", shall be substituted;

(b) for the words "rupees one thousand", the words "rupees five lakh", shall be substituted; and

(c) in the proviso,-

(i) for the words "one month", the words "three years", shall be substituted; and

(ii) for the words "rupees five hundred", the words "rupees two lakh", shall be substituted.

**6. Amendment of section 18.-** In section 18 of the principal Act,-

(a) in sub-section (1),-

(i) for the words "fifty rupees", the words "three lakh rupees", shall be substituted; and

(ii) for the words "one hundred rupees", the words "five lakh rupees", shall be substituted.

(b) in sub-section (2), for the words "ten rupees", the words "two lakh rupees", shall be substituted.

**7. Insertion of new sections 18A, 18B and 18C.-**After section 18 of the principal Act, the following new sections shall be inserted, namely,-

**"18-A. Settlement of disputes by Ombudsperson.-** The Government shall by notification appoint an Ombudsperson who can act as mediator between the pawner or pawn-broker, for settling the disputes. The procedure and guidelines for the settlement and mediation shall be in the manner as may be prescribed.

**18-B. Grievances redressal forum.-**The Government shall establish suitable grievance mechanism. The procedure and guidelines for grievance mechanism shall be in the manner as may be prescribed.

**18-C. Authorized Officer.-** (1) The Group-B Officer of Revenue Department or Rural Development and Panchayath Raj Department or Urban Development Department or Town Planning Department or Woman and Child Development Department or Social Welfare Department or Minority Welfare Department or Tribal Welfare Department or Backward Classes Welfare Department shall report if any person is in contravention of the provisions of this Act and the Karnataka Prohibition of Charging Exorbitant Interest Act 2004 (Karnataka Act No 14 of 2004) to the concerned Registrar, Assistant Registrar or any Officer authorized by the State Government in this behalf.

(2) The Registrar, the Assistant Registrar or any Officer authorized may on his own motion or on the report submitted by the Officers referred in sub-section (1), shall take action under the provisions of this Act."

## STATEMENT OF OBJECTS AND REASONS

It is considered necessary to amend the Karnataka Pawn Brokers Act, 1961 (Karnataka Act No 13 of 1962) to protect economically vulnerable groups and individuals from the undue hardship usurious interests rates and coercive means of recovery by licensed money lender and unlicensed money lender.

Hence, the Bill.

## FINANCIAL MEMORANDUM

There is no extra expenditure involved in the proposed measure.

**MEMORANDUM REGARDING DELEGATED LEGISLATION**

| | |
|---|---|
| **Clause 7:** | (1) Section 18-A proposes to be inserted by this clause empowers the Government to prescribe by rules the procedure and guidelines for the settlement and the manner of mediation by the Ombudsperson.<br>(2) Section 18-B proposes to be inserted by this clause empowers the Government to prescribe by rules the procedure and guidelines for grievances mechanism of the grievances redressal forum. |

The proposed delegation of Legislative power is normal in character.

**KYATHASANDRA N.RAJANNA**
Minister for Co-operation
excluding Agriculture Marketing

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA PAWN BROKERS ACT, 1961**

**(KARNATAKA ACT 13 OF 1962)**

**XXX XXX XXX**

**3. Pawn-broker to obtain licence.-** No person shall, after the expiry of six months from the date on which the provisions of this Act come into force in any area, carry on or continue to carry on business as a pawnbroker at any place in such area, unless he has obtained a pawn-broker's licence under this Act and after the commencement of the Karnataka Pawn Brokers (Amendment) Act, 1985, except on payment of security deposit as provided in section 4A.

**Explanation 1.-** Where a pawnbroker has more than one shop or place of business, whether in the same town or village or in different towns and villages he shall obtain a separate pawnbroker's licence in respect of each such shop or place of business.

**Explanation 2.-** Every pawn-broker's licence granted under this Act shall be valid for a term of five years, but may be renewed from term to term.

**XXX XXX XXX**

**15. Pawnbroker advancing smaller amount or receiving higher interest than that specified in accounts to be punishable.-** (1) Any pawnbroker who actually advances an amount less than that shown in the pawn-ticket or in his accounts or registers or who takes or receives interest or any other charge at a rate higher than that shown in the pawn-ticket or in his accounts or registers shall, on conviction be punished with fine which may extend to five hundred rupees.

**XXX XXX XXX**

**16. Certain other acts of pawnbrokers to be punishable.-** A pawnbroker who,-

(1) takes an article in pawn from any person appearing to be under the age of fourteen years or to be intoxicated

(2) purchases or takes in pawn or exchange a pawn-ticket issued by another pawnbroker

(3) employs any person under the age of sixteen years to take pledges in pawn

(4) under any pretence purchases, except at a public auction, any pledge while in pawn with him

(5) suffers any pledge while in pawn with him to be redeemed with a view to his purchasing it

(6) makes any contract or agreement with any person pawning or offering to pawn any article, or with the owner thereof, for the purchase, sale, or disposition thereof within the time of redemption; or

(7) sells hypothecates, pawns or otherwise disposes of any pledge pawned with him except at such time and in such manner as is authorised by or under the Act

shall on conviction be punished with imprisonment for a term which may extend to six months or with fine which may extend to one thousand rupees or with both

Provided that for an act referred to in clause (7), the term of imprisonment shall not be less than one month and the fine shall not be less than five hundred rupees.

**XXX** **XXX** **XXX**

**16A. Pawnbroker to redeem pledges.-**

**XXX** **XXX** **XXX**

(2) Any pawnbroker who fails to so redeem shall, on conviction, be punished with imprisonment for a term which may extend to six months and with fine which may extend to rupees one thousand:

Provided that the term of imprisonment shall not be less than one month and the fine shall not be less than rupees five hundred.

**XXX** **XXX** **XXX**

**18. General penalty for contravention of Act, etc.-** (1) Whoever contravenes any of the provisions of this Act or of any rule or of any terms or conditions of a licence made or granted thereunder shall, if no other penalty is elsewhere provided in this Act for such contravention, on conviction be punished with fine which may extend to fifty rupees and, if such person has been previously convicted whether under this section or any other provision contained in this Act, with fine which may extend to one hundred rupees.

(2) Any person who after having been convicted of the offence of carrying on, or continuing to carry on the business of pawnbroker in contravention of the provisions of section 3, continues to commit the same offence in the same year, shall in addition to the fine to which he is liable under sub-section (1), be punished with a further fine which may extend to ten rupees for each day after the previous date of conviction during which he continues so to offend.

**XXX** **XXX** **XXX**

Govt. Press, Vikasa Soudha, Bengalur, 3rd Mar, 2025, P7, W.D. , Copies 500

(Provisionally admitted)

**KARNATAKA LEGISLATIVE ASSEMBLY**
**(SIXTEENTH ASSEMBLY)**
**SIXTH SESSION**

Amendments to the Karnataka Pawn Brokers (Amendment)Bill, 2025 (LA Bill No.2 of 2025);

By Shri Kyathasandra N. Rajanna Minister for Co-operation Excluding Agricultural Marketing;

I hereby give notice of my intention to move the following amendment to the Karnataka Pawn Brokers (Amendment)Bill, 2025 (LA Bill No.2 of 2025), namely:-

**Clause-2**

In the said Bill, in clause 2, for the words "two years" the words "three years" shall be substituted.

**M.K.VISHALAKSHI**
Secretary